

بسم الله الرّحمٰن الرّحيم

# ಹಝ್ರತ್ ಉಸ್ಮಾನ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **05-03-2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಸ್ಮಾನ್(ರ)ರ ವಿರುದ್ಧ ಎದ್ದ ಪಿತೂರಿಯ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮೂವರು ವ್ಯಕ್ತಿಗಳಾದ ಮುಹಮ್ಮದ್ ಬಿನ್ ಅಬೂಬಕರ್, ಮುಹಮ್ಮದ್ ಬಿನ್ ಹುಧೈಫ ಮತ್ತು ಅಮ್ಮಾರ್ ಬಿನ್ ಯಾಸಿರ್ ವಿದ್ರೋಹಿಗಳ ಮಾತಿಗೆ ಮೋಸ ಹೋಗಿ ಅವರೊಂದಿಗೆ ಸೇರಿಕೊಂಡಿದ್ದರು. ಇವರಲ್ಲದೆ ಮದೀನ ನಿವಾಸಿಗಳಲ್ಲಿ ಯಾರಿಗೂ ಗಲಭೆಕೋರರೊಂದಿಗೆ ಅನುಕಂಪ ಇರಲಿಲ್ಲ. ಪ್ರತಿಯೊಬ್ಬರು ಅವರನ್ನು ದೂಷಿಸುತ್ತಲೂ ಶಪಿಸುತ್ತಲೂ ಇದ್ದರು. ಆದರೆ ವಿದ್ರೋಹಿಗಳು ಯಾರ ದೂಷಣೆಯ ಪರಿವೆ ಮಾಡುತ್ತಿರಲಿಲ್ಲ. ಹಝ್ರತ್ ಉಸ್ಮಾನ್(ರ) ಖಿಲಾಫತ್ ಸ್ಥಾನವನ್ನು ತ್ಯಜಿಸುವಂತೆ ಮಾಡಲು 20 ದಿನಗಳ ವರೆಗೆ ವಿದ್ರೋಹಿಗಳು ಬಾಯಿಮಾತಿನ ಮೂಲಕ ಪ್ರಯತ್ನಿಸಿದರು. ಆದರೆ ಹಝ್ರತ್ ಉಸ್ಮಾನ್(ರ) ಇದನ್ನು ಸಂಪೂರ್ಣವಾಗಿ ನಿರಾಕರಿಸಿದರು. ಅವರು ಹೇಳಿದರು: ಅಲ್ಲಾಹನು ನನಗೆ ತೊಡಿಸಿದ ನಿಲುವಂಗಿಯನ್ನು ನಾನು ಕಳಚುವಂತಿಲ್ಲ. ಯಾರು ಬೇಕಾದರೂ ಇತರರ ಮೇಲೆ ದೌರ್ಜನ್ಯ ಮಾಡುವ ರೀತಿಯಲ್ಲಿ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯವನ್ನು ಅರಕ್ಷಿತಾವಸ್ಥೆಯಲ್ಲಿ ಬಿಡಲು ಸಾಧ್ಯವಲ್ಲ. ಈ ಕಲಹದಿಂದ ಬಿಟ್ಟುನಿಲ್ಲಲು ಅವರನ್ನು ಉಪದೇಶಿಸುತ್ತಿದ್ದರು. ಹಝ್ರತ್ ಉಸ್ಮಾನ್(ರ) ಹೇಳಿದರು: ಇಂದು ಇವರು ಕಲಹವನ್ನುಂಟು ಮಾಡುತ್ತಾರೆ ಮತ್ತು ನನ್ನ ಜೀವಿತದಿಂದ ಬೇಸರಗೊಂಡಿದ್ದಾರೆ. ಆದರೆ "ಉಸ್ಮಾನ್‌ರ ಆಯಸ್ಸಿನ ಒಂದೊಂದು ದಿನ ಒಂದೊಂದು ವರ್ಷವಾಗಿ ಬದಲಾಗಿದ್ದರೆ ಮತ್ತು ಅವರು ಬೇಗನೇ ನಮ್ಮನ್ನು ಬಿಟ್ಟುಹೋಗಿರದಿದ್ದರೆ ಎಷ್ಟು ಚೆನ್ನಾಗಿತ್ತು" ಎಂದು ನನ್ನ ಮರಣದ ನಂತರ ಬಯಸುವರು. ಏಕೆಂದರೆ ನನ್ನ ನಂತರ ಘೋರವಾದ ಕೊಲೆಗಳು, ಹಕ್ಕುಗಳ ಅಪಹರಣ ಮತ್ತು ಅವ್ಯವಸ್ಥೆಗಳು ಉಂಟಾಗುವುವು.

ಅಂತೆಯೇ ಬನೂ ಉಮಯ್ಯರ ಕಾಲದಲ್ಲಿ ಖಿಲಾಫತ್ ಆಡಳಿತಶಾಹಿಯಾಗಿ ಬದಲಾಯಿತು ಮತ್ತು ವಿದ್ರೋಹಿಗಳು ವಿದ್ರೋಹ ಮಾಡುವುದನ್ನು ಮರೆತುಬಿಡುವ ರೀತಿಯಲ್ಲಿ ಅವರಿಗೆ ಶಿಕ್ಷೆ ಕೂಡ ಲಭಿಸಿತು. ಹೇಗಿದ್ದರೂ, ಇತರೆಡೆಗಳಿಂದ ಸೈನ್ಯಗಳು ಬಂದು ಅವರಿಗೆ ಅವರ ಕುಕೃತ್ಯಗಳಿಗೆ ಶಿಕ್ಷೆ ಅನುಭವಿಸಬೇಕಾಗಿ ಬರಬಹುದು ಎಂಬ ಭಯದಿಂದ ಬೇಗನೇ ತೀರ್ಮಾನ ಮಾಡಬೇಕೆಂಬ ಯೋಚನೆ 20 ದಿನಗಳು ಕಳೆದ ನಂತರ ವಿದ್ರೋಹಿಗಳಿಗೆ ಉಂಟಾಯಿತು. ಹಾಗೆ ಅವರು ಹಝ್ರತ್ ಉಸ್ಮಾನ್(ರ) ಮನೆಯಿಂದ ಹೊರಗೆ ಹೋಗುವುದನ್ನು ತಡೆದರು. ಆಹಾರ ಪಾನೀಯಗಳು ಅವರ ಮನೆಯ ಒಳಗೆ ಪ್ರವೇಶಿಸುವುದನ್ನು ಕೂಡ ತಡೆದರು. ಈ ರೀತಿಯಲ್ಲಿ ಹಝ್ರತ್ ಉಸ್ಮಾನ್(ರ) ಒತ್ತಡಕ್ಕೆ ಮಣಿದು ಅವರ ಬೇಡಿಕೆಗಳನ್ನು ಅಂಗೀಕರಿಸುವರು ಎಂದು ಅವರು ಭಾವಿಸಿದ್ದರು. ಆದರೆ ಅಲ್ಲಾಹನು ಅವರಿಗೆ ತೊಡಿಸಿದ ನಿಲುವಂಗಿಯನ್ನು ಹೇಗೆ ಕಳಚುವುದು ಎಂದು ಅವರು ಮೊದಲೇ ಹೇಳಿದ್ದರು.

ಹೇಗಿದ್ದರೂ ಮದೀನದ ನಿಯಂತ್ರಣ ಈ ಜನರ ಕೈಗಳಲ್ಲೇ ಇತ್ತು. ಅವರೆಲ್ಲರೂ ಸೇರಿಕೊಂಡು ಈಜಿಪ್ಟಿನ ಸೈನ್ಯದ ಸೇನಾಧಿಪತಿಯಾದ ಗ್ಹಾಫ್‌ಖಿಯನ್ನು ಅವರ ನೇತಾರರನ್ನಾಗಿ ಅಂಗೀಕರಿಸಿದ್ದರು. ಪಿತೂರಿಯ ಬೇರು ಇರುವುದು ಈಜಿಪ್ಟಿನಲ್ಲಾಗಿದೆ ಎಂದು ಇದರಿಂದ ಸಾಬೀತಾಗುತ್ತದೆ. ಅಬ್ದುಲ್ಲಾಹ್ ಬಿನ್ ಸಬಾ ಇದ್ದುದು ಅಲ್ಲೇ ಆಗಿತ್ತು. ಹಝ್ರತ್ ಉಸ್ಮಾನ್(ರ)ರ ಮನೆಯನ್ನು ಸುತ್ತುವರೆದ ನಂತರ ವಿದ್ರೋಹಿಗಳು ಇತರರ ಮೇಲೆ ಸಹ ಕಠಿಣವಾಗಿ ವರ್ತಿಸಲು ಶುರುಮಾಡಿದರು. ಹೀಗೆ ಮದೀನ ಸಮಾಧಾನದ ಬೀಡು ಆಗುವ ಬದಲಿಗೆ ಯುದ್ಧಭೂಮಿಯಾಗಿ ಪರಿಣಮಿಸಿತು. ಮದೀನ ನಿವಾಸಿಗಳ ಗೌರವಾದರಗಳು ಅಪಾಯದಲ್ಲಿತ್ತು. ಆಯುಧವಿಲ್ಲದೇ ಯಾರೂ ಮನೆಯಿಂದ ಹೊರಗೆ ಹೋಗುತ್ತಿರಲಿಲ್ಲ. ಗಲಭೆಕೋರರನ್ನು ಎದುರಿಸುವವರನ್ನು ಅವರು ಕೊಲ್ಲುತ್ತಿದ್ದರು. ವಿದ್ರೋಹಿ ಜನರು ಹಝ್ರತ್ ಉಸ್ಮಾನ್‌ರ ಮನೆಗೆ ಮುತ್ತಿಗೆ ಹಾಕಿಕೊಂಡು ಆಹಾರ ಪಾನೀಯಗಳನ್ನು ಕೂಡ ತಡೆದಾಗ, ಹಝ್ರತ್ ಉಸ್ಮಾನ್(ರ) ತನ್ನ ನೆರೆಕರೆಯ ಒಬ್ಬ ಹುಡುಗನನ್ನು ಹಝ್ರತ್ ಅಲಿ, ಹಝ್ರತ್ ತಲ್‌ಹ, ಹಝ್ರತ್ ಝುಬೇರ್ ಮತ್ತು ಹಝ್ರತ್ ಪೈಗಂಬರ್(ಸ)ರ ಪತ್ನಿಯಂದಿರ ಬಳಿಗೆ ಕಳುಹಿಸಿದರು. ವಿದ್ರೋಹಿಗಳು ನಮಗೆ ನೀರನ್ನು ಕೂಡ ತಡೆದಿದ್ದಾರೆ, ನಿಮ್ಮಿಂದ ಸಾಧ್ಯವಾದರೆ, ನಮಗೆ ನೀರು ತಲುಪಿಸಲು ಪ್ರಯತ್ನಿಸಿರಿ ಎಂದು ಅವರೊಡನೆ ಹೇಳಿ ತಿಳಿಸಿದರು. ಪುರುಷರಲ್ಲಿ ಮೊಟ್ಟಮೊದಲು ಹಝ್ರತ್ ಅಲಿ(ರ) ಬಂದು ವಿದ್ರೋಹಿಗಳೊಡನೆ ಹೀಗೆ ಹೇಳಿದರು: "ನೀವು ಇದೇನು ಮಾಡುತ್ತಿರುವಿರಿ? ನಿಮ್ಮ ಕರ್ಮಗಳು ಸತ್ಯವಿಶ್ವಾಸಿಗಳ ಕೃತ್ಯಗಳ ಹಾಗೆಯೂ ಇಲ್ಲ; ಸತ್ಯನಿಷೇಧಿಗಳ ಕೃತ್ಯಗಳ ಹಾಗೆಯೂ ಇಲ್ಲ. ಹಝ್ರತ್ ಉಸ್ಮಾನ್‌ರ ಮನೆಗೆ ಆಹಾರ ಪಾನೀಯ ತಲುಪದಂತೆ ಮಾಡಬೇಡಿರಿ. ರೋಮನ್ನರು ಮತ್ತು ಪರ್ಶಿಯನ್ನರು ಕೂಡ ಕೈದಿ ಮಾಡುವಾಗ ಆಹಾರ ಪಾನೀಯಗಳನ್ನು ಕೊಡುತ್ತಾರೆ. ಇಸ್ಲಾಮಿನ ರೀತಿಯ ಪ್ರಕಾರವಾದರೋ ನಿಮ್ಮ ಈ ಕೃತ್ಯ ಯಾವ

ರೀತಿಯಲ್ಲೂ ಅನುಮತನೀಯವಲ್ಲ. ಹಝ್ರತ್ ಉಸ್ಮಾನ್‌ರನ್ನು ಬಂಧಿಸುವುದು ಮತ್ತು ಅವರನ್ನು ಕೊಲೆ ಮಾಡುವುದು ಅನುಮತನೀಯವೆಂದು ನೀವು ಭಾವಿಸುವಂತಾಗಲು ಹಝ್ರತ್ ಉಸ್ಮಾನ್ ನಿಮಗೆ ಏನು ಕೇಡುಂಟು ಮಾಡಿರುವರು?" ಆದರೆ ಹಝ್ರತ್ ಅಲಿಯವರ ಈ ಉಪದೇಶ ಅವರ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ. ವಿದ್ರೋಹಿಗಳು ಸ್ಪಷ್ಟವಾಗಿ ಹೀಗೆ ಹೇಳಿದರು: "ಏನೇ ಆದರೂ ನಾವು ಅವರಿಗೆ ಆಹಾರ ಪಾನೀಯ ತಲುಪಲು ಬಿಡುವುದಿಲ್ಲ." ಹಝ್ರತ್ ಪೈಗಂಬರ್[ಸ]ರ ವಸ್ಸೀ (ಉಯಿಲು ಮಾಡಲ್ಪಟ್ಟವ) ಮತ್ತು ಯಥಾರ್ಥ ಉತ್ತರಾಧಿಕಾರಿ ಯೆಂದು ಯಾರ ಬಗ್ಗೆ ವಿದ್ರೋಹಿಗಳು ಹೇಳುತ್ತಾರೋ ಅವರಿಗೆ ವಿದ್ರೋಹಿಗಳು ಕೊಟ್ಟ ಉತ್ತರವಾಗಿದೆ ಇದು.

ಸೌಮ್ಯತೆಯಿಂದ ವರ್ತಿಸುವುದರಿಂದ ವಿದ್ರೋಹಿಗಳು ಏನನ್ನೂ ಸಮ್ಮತಿಸಲಾರರು ಎಂದು ಹಝ್ರತ್ ಉಸ್ಮಾನ್‌ರಿಗೆ ಅರಿವಾಯಿತು. ಹಝ್ರತ್ ಉಸ್ಮಾನ್[ರ] ಒಂದು ಪತ್ರವನ್ನು ಎಲ್ಲ ರಾಜ್ಯಗಳ ಅಧಿಕಾರಿಗಳ ಹೆಸರಲ್ಲಿ ರವಾನೆ ಮಾಡಿದರು. ಅದರ ಸಂಕ್ಷೇಪ ಹೀಗಿದೆ: "ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರರ ನಂತರ ಯಾವುದೇ ಬಯಕೆ ಅಥವಾ ವಿನಂತಿ ಇಲ್ಲದೆ ನನ್ನನ್ನು ಖಿಲಾಫತಿನ ಸಮಾಲೋಚನೆಯ ಕೆಲಸ ಒಪ್ಪಿಸಲ್ಪಟ್ಟ ಜನರಲ್ಲಿ ಸೇರಿಸಿದ್ದರು. ಅನಂತರ ನನ್ನ ಇಚ್ಛೆ ಅಥವಾ ಬೇಡಿಕೆಯಿಲ್ಲದೆ ನನ್ನನ್ನು ಖಿಲಾಫತಿಗಾಗಿ ಆಯ್ಕೆ ಮಾಡಲಾಯಿತು. ನನಗಿಂತ ಮುಂಚಿನ ಖಲೀಫರು ಮಾಡುತ್ತಿದ್ದ ಕೆಲಸಗಳನ್ನು ನಾನು ನಿರಂತರವಾಗಿ ಮುಂದುವರಿಸಿದೆ. ನಾನು ನನ್ನ ಕಡೆಯಿಂದ ಯಾವುದೇ ಹೊಸ ಆಚಾರಗಳನ್ನು ಶುರುಮಾಡಿರಲಿಲ್ಲ. ಆದರೆ ಕೆಲವು ಜನರ ಹೃದಯಗಳಲ್ಲಿ ಕೆಡುಕಿನ ಬೀಜ ನೆಡಲ್ಪಟ್ಟಿತು ಮತ್ತು ಕುಕೃತ್ಯಗಳು ಜಾರಿಯಾಯಿತು. ಅವರು ನನ್ನ ವಿರುದ್ಧ ಕುತಂತ್ರಗಳನ್ನು ಮಾಡಲು ಶುರುಮಾಡಿದರು. ಅವರು ಜನರ ಮುಂದೆ ಒಂದು ಮುಖವನ್ನು ಪ್ರಕಟಿಸಿದರು ಮತ್ತು ಹೃದಯದಲ್ಲಿ ಮತ್ತೊಂದು ಉದ್ದೇಶವನ್ನು ಇರಿಸಿಕೊಂಡಿದ್ದರು. ನನಗಿಂತ ಮುಂಚಿನ ಖಲೀಫರ ಮೇಲೆ ಹೊರಿಸಲಾಗುತ್ತಿದ್ದಂತಹ ಆರೋಪಗಳನ್ನು ನನ್ನ ಮೇಲೆ ಸಹ ಹೊರಿಸಲು ಶುರುಮಾಡಿದರು. ಆದರೆ ನಾನು ಗೊತ್ತಿದ್ದೂ ಮೌನವಾಗಿದ್ದೆ. ಈ ಜನರು ನನ್ನ ದಯೆಯಿಂದ ಅನುಮತನೀಯವಲ್ಲದ ಪ್ರಯೋಜನವನ್ನು ಪಡೆಯುತ್ತಾ ವಿದ್ರೋಹವನ್ನು ಇನ್ನೂ ಹೆಚ್ಚಿಸಿದರು. ಕೊನೆಗೆ ಸತ್ಯನಿಷೇಧಿಗಳ ಹಾಗೆ ಮದೀನದ ಮೇಲೆ ಅವರು ಆಕ್ರಮಣ ನಡೆಸಿದರು. ಆದ್ದರಿಂದ ಇಂದು ಏನಾದರೂ ನಿಮಗೆ ಮಾಡಲು ಸಾಧ್ಯವಿದ್ದರೆ, ಸಹಾಯ ತಲುಪಿಸುವ ಏರ್ಪಾಡು ಮಾಡಿರಿ."

ಅದೇ ರೀತಿಯಲ್ಲಿ ಹಝ್ರತ್ ಉಸ್ಮಾನ್[ರ] ಹಾಜಿಗಳ ಹೆಸರಲ್ಲಿ ಸಹ ಒಂದು ಪತ್ರವನ್ನು ಬರೆದರು. ಅದರ ಸಂಕ್ಷಿಪ್ತ ತಾತ್ಪರ್ಯ ಹೀಗಿದೆ: ನಾನು ಅಲ್ಲಾಹನ ಕಡೆಗೆ ನಿಮ್ಮ ಗಮನವನ್ನು ಸೆಳೆಯುತ್ತೇನೆ. ಅವನ ಔದಾರ್ಯಗಳನ್ನು ನೆನಪಿಸುತ್ತೇನೆ. ಈಗ ಕೆಲವು ಜನರು ಪಿತೂರಿಯನ್ನುಂಟು ಮಾಡುತ್ತಿದ್ದಾರೆ ಮತ್ತು ಇಸ್ಲಾಮಿನಲ್ಲಿ ಬಿರುಕು ಉಂಟುಮಾಡುವ ಪ್ರಯತ್ನದಲ್ಲಿ ಮಗ್ನರಾಗಿದ್ದಾರೆ. ಖಲೀಫರನ್ನು ಅಲ್ಲಾಹನೇ ನೇಮಿಸುತ್ತಾನೆ ಎಂದು ಈ ಜನರು ಚಿಂತಿಸಲಿಲ್ಲ ಮತ್ತು ನನ್ನ ಮೇಲೆ ಆರೋಪ ಹೊರಿಸುವವರ ಮಾತುಗಳನ್ನು ಅವರು ಸಮ್ಮತಿಸಿದರು. **"ಯಾ ಅಯ್ಯುಹಲ್ಲದೀನ ಆಮನೂ ಇನ್ ಜಾಅಕುಂ ಫಾಸಿಕುನ್ ಬಿನಬಇನ್ ಫತಬಯ್ಯನೂ"** ಎಂಬ ಪವಿತ್ರ ಖುರ್‌ಆನಿನ ಆದೇಶದ ಪರಿವೆ ಮಾಡಲಿಲ್ಲ. ಎಂದರೆ, "ಎಲೈ ವಿಶ್ವಾಸಿಗಳೇ, ದುರ್ಮಾರ್ಗಿಯಾದ ಯಾವನಾದರೂ ನಿಮ್ಮ ಬಳಿಗೆ ಯಾವುದಾದರೂ ಸುದ್ದಿಯನ್ನು ತಂದರೆ, ನೀವು ಅದರ (ವಾಸ್ತವಿಕತೆಯ) ಬಗ್ಗೆ ಪೂರ್ಣ ತನಿಖೆ ಮಾಡಿರಿ" (49:7). ಅಲ್ಲಾಹನು ಹಝ್ರತ್ ಪೈಗಂಬರ್[ಸ]ರ ಕುರಿತು ಹೇಳುತ್ತಾನೆ: **ಇನ್ನಲ್ಲದೀನ ಯುಬಾಯಿಊನಕ ಇನ್ನಮಾ ಯುಬಾಯಿಊನಲ್ಲಾಹ.** ಎಂದರೆ, "ನಿನ್ನೊಡನೆ ನಿಷ್ಠೆಯ ಪ್ರತಿಜ್ಞೆಯನ್ನು (ಬೈಅತ್) ಮಾಡುವವರು ನಿಜವಾಗಿಯೂ ಅಲ್ಲಾಹನೊಡನೆಯೇ ನಿಷ್ಠೆಯ ಪ್ರತಿಜ್ಞೆ ಮಾಡುತ್ತಾರೆ" (48:11). ನಾನು ಹಝ್ರತ್ ಪೈಗಂಬರ್[ಸ]ರ ಉತ್ತರಾಧಿಕಾರಿಯಾಗಿದ್ದೇನೆ. ಆದಾಗ್ಯೂ ಇವರು ನನಗೆ ಮತ್ತು ನನಗೆ ಮಾಡಿದ ಬೈಅತಿಗೆ ಗೌರವ ಕೊಡಲಿಲ್ಲ. ಯಾವುದೇ ಸಮುದಾಯ ನೇತೃತ್ವವಿಲ್ಲದೆ ಅಭಿವೃದ್ಧಿ ಹೊಂದಲು ಸಾಧ್ಯವಲ್ಲ. ಓರ್ವ ಇಮಾಂ ಇಲ್ಲದಿದ್ದರೆ, ಜಮಾಅತಿನ ಎಲ್ಲ ಕೆಲಸಗಳು ಹಾಳಾಗಿ ನಾಶವಾಗುತ್ತದೆ. ಈ ಜನರು ಮುಸ್ಲಿಂ ಸಮುದಾಯವನ್ನು ನಾಶಮಾಡಲು ಬಯಸುತ್ತಾರೆ. ಇದಲ್ಲದೇ ಇವರಿಗೆ ಬೇರೆ ಉದ್ದೇಶವಿಲ್ಲ. ಕಾರಣವೇನೆಂದರೆ, ನಾನು ಇವರ ಮಾತುಗಳನ್ನು ಅಂಗೀಕರಿಸಿಕೊಂಡು ಅಧಿಕಾರಿಗಳನ್ನು ಬದಲಾಯಿಸುತ್ತೇನೆಂದು ಒಪ್ಪಿಕೊಂಡಿದ್ದೆ. ಅದರೂ ಅವರು ತಮ್ಮ ವಿದ್ರೋಹಗಳನ್ನು ಕೈಬಿಡಲಿಲ್ಲ. ಈಗ ಇವರು ಮೂರು ಸಂಗತಿಗಳಲ್ಲಿ ಒಂದರ ಬೇಡಿಕೆಯನ್ನು ಇರಿಸಿದ್ದಾರೆ. ಒಂದನೆಯದು ಏನೆಂದರೆ, ನನ್ನ ಕಾಲದಲ್ಲಿ ಶಿಕ್ಷೆ ಲಭಿಸಿದ ಎಲ್ಲರ ಪರಿಹಾರ ಧನವನ್ನು ನನ್ನಿಂದ ಪಡೆಯುವುದು. ಇದನ್ನು ನಾನು ಅಂಗೀಕರಿಸುವುದಿಲ್ಲವಾದರೆ, ನಾನು ಖಿಲಾಫತ್ ಪದವಿಯನ್ನು ಬಿಟ್ಟುಬಿಡಬೇಕು. ಇವರು ನನ್ನ ಸ್ಥಾನದಲ್ಲಿ ಬೇರೆಯವರನ್ನು ನಿಶ್ಚಯಿಸುವರು. ಇದನ್ನು ಕೂಡ ನಾನು ಅಂಗೀಕರಿಸುವುದಿಲ್ಲವೆಂದಾದರೆ, ನನ್ನನ್ನು ಅನುಸರಿಸುವುದರಿಂದ ಬಿಟ್ಟುನಿಲ್ಲಬೇಕೆಂದು ಈ ಜನರು ಇವರಿಗೆ ಸಮಾನವಾದ ಯೋಚನೆ ಇರಿಸುವ ಎಲ್ಲರಿಗೂ ಸಂದೇಶ ಕಳುಹಿಸುವುದಾಗಿ ನನಗೆ ಬೆದರಿಕೆ ಹಾಕುತ್ತಿದ್ದಾರೆ.

ಇದಕ್ಕೆ ಉತ್ತರವೇನೆಂದರೆ, ನನಗಿಂತ ಮುಂಚಿನ ಖಲೀಫರು ಸಹ ಕೆಲವೊಮ್ಮೆ ತೀರ್ಮಾನದಲ್ಲಿ ತಪ್ಪು ಮಾಡುತ್ತಿದ್ದರು. ಆದರೆ ಅವರನ್ನು ಎಂದೂ ಶಿಕ್ಷಿಸಲಾಗಿಲ್ಲ. ನೀವು ನನ್ನನ್ನು ಕೊಲ್ಲಲು ಬಯಸುತ್ತೀರಿ ಎಂದು ಇದರಿಂದ ಅರ್ಥವಾಗುತ್ತದೆ. ಖಿಲಾಫತ್ ಸ್ಥಾನವನ್ನು ತ್ಯಾಗ ಮಾಡಬೇಕು ಎಂಬುದಕ್ಕೆ ನನ್ನ ಕಡೆಯಿಂದ ಉತ್ತರವೇನೆಂದರೆ, ಈ ಜನರು ನನ್ನನ್ನು ತುಂಡರಿಸಿ ಮಾಂಸದ ತುಣುಕುಗಳನ್ನಾಗಿ ಮಾಡಿದರೂ ಅದಕ್ಕೂ ನಾನು ತಯಾರಿದ್ದೇನೆ, ಆದರೆ ಖಿಲಾಫತ್ ಸ್ಥಾನವನ್ನು ತ್ಯಜಿಸಲು ಸಾಧ್ಯವಲ್ಲ. ನನ್ನ ಮಾತನ್ನು ಅಂಗೀಕರಿಸಬಾರದೆಂದು ಹೇಳಿಕೊಂಡು ಇವರು ನಾಲ್ಕೂ ದಿಕ್ಕುಗಳಿಗೆ ಜನರನ್ನು ಕಳುಹಿಸುವರು ಎಂಬ ಮೂರನೇ ಸಂಗತಿಗೆ ನನ್ನ ಉತ್ತರವೇನೆಂದರೆ, ನಾನು ಅಲ್ಲಾಹನ ಕಡೆಯಿಂದ ಇದಕ್ಕೆ ಜವಾಬ್ದಾರನಲ್ಲ. ಯಾರು ಪ್ರತಿಜ್ಞೆಯನ್ನು ಮುರಿಯಲು ಇಚ್ಛಿಸುತ್ತಾನೋ ಅವನ ಕೃತ್ಯವನ್ನು ನಾನು

ಇಷ್ಟಪಡುವುದಿಲ್ಲ ಮತ್ತು ಅಲ್ಲಾಹನು ಸಹ ಅದನ್ನು ಇಷ್ಟಪಡುವುದಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಜ್ಜ್ ದಿನಗಳು ಸಮೀಪವಾಗುತ್ತಿದ್ದ ಕಾರಣ ನಾಲ್ಕೂ ಕಡೆಯಿಂದ ಜನರು ಪವಿತ್ರ ಮಕ್ಕದಲ್ಲಿ ಒಟ್ಟುಗೂಡುತ್ತಿದ್ದರು. ಈ ವಿದ್ರೋಹಿಗಳು ಅಲ್ಲೂ ಹೋಗಿಕೊಂಡು ಕಲಹವನ್ನು ಉಂಟುಮಾಡದಿರಲು ಹಝ್ರತ್ ಉಸ್ಮಾನ್(ರ) ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್‌ರನ್ನು ಹಜ್ಜಿನ ಅಮೀರರನ್ನಾಗಿ ಮಾಡಿ ಕಳುಹಿಸಿದರು. ಹಝ್ರತ್ ಉಸ್ಮಾನ್(ರ) ಮೇಲೆ ಪ್ರಸ್ತಾಪಿಸಲಾದ ಪತ್ರವನ್ನು ಅವರ ಮೂಲಕ ರವಾನೆ ಮಾಡಿದ್ದರು. ಅದರ ಬಗ್ಗೆ ಗಲಭೆಕೋರರಿಗೆ ಗೊತ್ತಾದಾಗ, ಅವರು ಇನ್ನೂ ಹೆಚ್ಚು ಕಠಿಣವಾಗಿ ವರ್ತಿಸಲು ತೊಡಗಿದರು. ಜಗಳ ಉಂಟಾಗುವಂತೆ ಏನಾದರೂ ನೆಪವನ್ನು ಮಾಡಿಕೊಂಡು ಹಝ್ರತ್ ಉಸ್ಮಾನ್‌ರನ್ನು ಶಹೀದ್ ಮಾಡಲು ಸಂದರ್ಭವನ್ನು ಹುಡುಕುತ್ತಿದ್ದರು. ಆದರೆ ಅವರ ಎಲ್ಲ ಪ್ರಯತ್ನಗಳು ವ್ಯರ್ಥ ವಾಗುತ್ತಿದ್ದುವು. ಹಝ್ರತ್ ಉಸ್ಮಾನ್ ಅವರಿಗೆ ಕುಚೇಷ್ಟೆಗಳನ್ನು ಮಾಡಲು ಅವಕಾಶ ಸಿಗದಂತೆ ನೋಡುತ್ತಿದ್ದರು. ಸಹನೆಗೆಟ್ಟ ಅವರು ಕೊನೆಗೆ ರಾತ್ರಿ ಸಮಯದಲ್ಲಿ ಹಝ್ರತ್ ಉಸ್ಮಾನ್‌ರ ಮನೆಗೆ ಕಲ್ಲುಗಳನ್ನು ತೂರಲು ಯೋಜನೆ ಹೂಡಿದರು. ಹೀಗೆ ಆವೇಶಗೊಂಡು ಹಝ್ರತ್ ಉಸ್ಮಾನ್‌ರ ಮನೆಯವರು ಸಹ ಕಲ್ಲುಗಳನ್ನು ತೂರಿದರೆ ನಮ್ಮ ಮೇಲೆ ಆಕ್ರಮಣ ನಡೆಸುತ್ತಾರೆಂದು ಜನರೊಡನೆ ಹೇಳಲಿಕ್ಕಾಗಿ ಹೀಗೆ ಅವರು ಮಾಡುತ್ತಿದ್ದರು. ಆದರೆ ಹೀಗೆ ಕಲ್ಲು ತೂರುವುದರಿಂದ ಹಝ್ರತ್ ಉಸ್ಮಾನ್(ರ) ತನ್ನ ಕುಟುಂಬದ ಎಲ್ಲರನ್ನೂ ತಡೆದಿದ್ದರು. ಸಹಾಬರನ್ನು ಹಝ್ರತ್ ಉಸ್ಮಾನ್‌ರ ಬಳಿ ಒಟ್ಟುಗೂಡಲು ಆಗದಂತೆ ಮಾಡಲಾಗಿತ್ತು. ಆದರೂ ಸಹಾಬರು ತಮ್ಮ ಕರ್ತವ್ಯಗಳಿಂದ ಅಶ್ರದ್ಧರಾಗಿರಲಿಲ್ಲ. ಹಿರಿಯ ಸಹಾಬರು ಜನರನ್ನು ಮನವರಿಕೆ ಮಾಡಿಸುವುದರಲ್ಲಿ ನಿರತರಾಗಿದ್ದರು. ಅಂತೆಯೇ ಅಷ್ಟು ಪ್ರಭಾವಶಾಲಿಯಲ್ಲದ ಜನರು ಅಥವಾ ಯುವಕರು ಹಝ್ರತ್ ಉಸ್ಮಾನ್‌ರ ಸಂರಕ್ಷಣೆಯ ಪ್ರಯತ್ನದಲ್ಲಿ ಮಗ್ನರಾಗಿದ್ದರು. ಹಝ್ರತ್ ಉಸ್ಮಾನ್‌ರ ಜೀವ ರಕ್ಷಣೆಯ ವ್ಯರ್ಥವಾದ ಪ್ರಯತ್ನದಲ್ಲಿ ಸಹಾಬರ ಜೀವ ಹೋಗುವುದನ್ನು ಹಝ್ರತ್ ಉಸ್ಮಾನ್(ರ) ಇಷ್ಟಪಟ್ಟಿರಲಿಲ್ಲ. ವಿದ್ರೋಹಿಗಳನ್ನು ಎದುರಿಸದಿರಲು ಉಪದೇಶಿಸುತ್ತಿದ್ದರು. ಮುಂದಿನ ಪಿತೂರಿಗಳನ್ನು ದೂರಮಾಡಲು ಹಝ್ರತ್ ಪೈಗಂಬರ್(ಸ)ರ ಸಹವಾಸವನ್ನು ಪಡೆದ ಸಹಾಬರು ಸುರಕ್ಷಿತರಾಗಿರಬೇಕೆಂದು ಅವರು ಹೇಳುತ್ತಿದ್ದರು.

ಅನಂತರ ಹಝ್ರತ್ ಉಸ್ಮಾನ್‌ರ ಮೇಲೆ ಆಕ್ರಮಣ ನಡೆಸಲಿರುವ ಸಮಯವೂ ಬಂತು. ಏಕೆಂದರೆ ಹಜ್ಜ್‌ಗಾಗಿ ಒಟ್ಟುಗೂಡುವ ಮುಸ್ಲಿಮರಿಗಾಗಿ ಹಝ್ರತ್ ಉಸ್ಮಾನ್(ರ) ಕಳುಹಿಸಿದ್ದ ಹೃದಯಗಳನ್ನು ಕಂಪಿಸುವಂತಹ ಸಂದೇಶವನ್ನು ಹಿಜಾಜಿನ ಜನಸಮೂಹದ ಮುಂದೆ ಓದಿ ಹೇಳಲಾಯಿತು. ಮಕ್ಕಾ ಕಣಿವೆಯ ಒಂದು ಬದಿಯಿಂದ ಮತ್ತೊಂದು ಬದಿಯ ತನಕ ಅದರ ಶಬ್ದ ಪ್ರತಿಧ್ವನಿಸುತ್ತಿತ್ತು. ಹಜ್ಜಿನ ನಂತರ ಜಿಹಾದಿನ ಪ್ರತಿಫಲದಿಂದ ನಾವು ವಂಚಿತರಾಗುವುದಿಲ್ಲವೆಂದೂ ಈಜಿಪ್ಟಿನ ಗಲಭೆಕೋರರ ಸಂಗಡಿಗರನ್ನು ನಿರ್ಮೂಲನ ಮಾಡುವವು ಎಂದೂ ಹಜ್ಜ್‌ಗೆ ಒಟ್ಟುಗೂಡಿದ ಮುಸ್ಲಿಮರು ತೀರ್ಮಾನಿಸಿದರು. ಗಲಭೆಕೋರರ ಗುಪ್ತಚರರು ವಿದ್ರೋಹಿಗಳಿಗೆ ಇದರ ಬಗ್ಗೆ ತಿಳಿಸಿದರು. ಹೀಗೆ ಅವರ ಕ್ಯಾಂಪ್‌ನಲ್ಲಿ ತೀವ್ರತರದ ಗಾಬರಿಯ ಸ್ಥಿತಿಯುಂಟಾಯಿತು. ಎಲ್ಲಿಯ ವರೆಗೆಂದರೆ, ಈಗ ಹಝ್ರತ್ ಉಸ್ಮಾನ್‌ರನ್ನು ಕೊಲ್ಲದೇ ಬೇರೆ ಮಾರ್ಗವಿಲ್ಲವೆಂದು ಅವರು ಪರಸ್ಪರ ಹೇಳುತ್ತಿದ್ದರು. ಅವರನ್ನು ನಾವು ವಧಿಸದಿದ್ದರೆ ನಾವು ಮುಸ್ಲಿಮರ ಕೈಗಳಿಂದ ಕೊಲ್ಲಲ್ಪಡುವುದರಲ್ಲಿ ಸಂಶಯವಿಲ್ಲವೆಂದು ಹೇಳತೊಡಗಿದರು. ಈ ವಿದ್ರೋಹಿಗಳು ಹಝ್ರತ್ ಉಸ್ಮಾನ್‌ರನ್ನು ವಧಿಸಲು ಮನೆಯ ಮೇಲೆ ಆಕ್ರಮಣ ನಡೆಸಿ ಶಕ್ತವಾಗಿ ಒಳಗೆ ನುಗ್ಗಲು ಬಯಸಿದರು. ಸಹಾಬರು ಅವರನ್ನು ಎದುರಿಸಿದರು. ಪರಸ್ಪರ ಶಕ್ತವಾದ ಹೋರಾಟ ನಡೆಯಿತು. ಹಝ್ರತ್ ಉಸ್ಮಾನ್‌ರಿಗೆ ಈ ಜಗಳದ ಅರಿವಾದಾಗ ಅವರು ಸಹಾಬರನ್ನು ಜಗಳ ಮಾಡುವುದರಿಂದ ತಡೆದರು. ಆದರೆ ಈ ಘಟ್ಟದಲ್ಲಿ ಹಝ್ರತ್ ಉಸ್ಮಾನ್‌ರನ್ನು ಒಬ್ಬಂಟಿಯಾಗಿ ಬಿಡುವುದು ಪ್ರಾಮಾಣಿಕತೆಗೆ ವಿರುದ್ಧ ಮತ್ತು ಅನುಸರಣೆಯ ಆದೇಶಕ್ಕೆ ವಿರುದ್ಧವೆಂದು ಸಹಾಬರು ಭಾವಿಸುತ್ತಿದ್ದರು. ಕೊನೆಗೆ ಹಝ್ರತ್ ಉಸ್ಮಾನ್(ರ) ಹೊರಗೆ ಬಂದರು ಮತ್ತು ಸಹಾಬರನ್ನು ತನ್ನ ಮನೆಯ ಒಳಗೆ ಕರೆದರು. ಸಹಾಬರೊಡನೆ ಮತ್ತು ಅವರ ಸಹಾಯಕರೊಡನೆ ಪರಲೋಕಕ್ಕೆ ಬೇಕಾಗಿರುವ ಸಾಮಾನುಗಳನ್ನು ಒಟ್ಟುಗೂಡಿಸಲು ಹಝ್ರತ್ ಉಸ್ಮಾನ್ ಉಪದೇಶಿಸಿದರು. ನನ್ನ ಬಳಿಗೆ ತಲುಪದಂತೆ ತಡೆಯಲ್ಪಟ್ಟ ಸಹಾಬರನ್ನು ಕರೆಯಲು ಅವರು ಹೇಳಿದರು. ಜನರು ಒಟ್ಟುಗೂಡಿದಾಗ ಹಝ್ರತ್ ಉಸ್ಮಾನ್(ರ) ಮನೆಯ ಗೋಡೆಯನ್ನು ಹತ್ತಿದರು ಮತ್ತು ಎಲ್ಲರೊಡನೆ ಸಮೀಪಕ್ಕೆ ಬರಲು ಹೇಳಿದರು. ಎಲ್ಲರೂ ಸಮೀಪವಾದಾಗ ಹೇಳಿದರು: ಎಲೈ ಜನರೇ ಕುಳಿತುಕೊಳ್ಳಿರಿ. ಆಗ ಸಹಾಬರೂ ಮತ್ತು ಸಭೆಯ ಗಾಂಭೀರ್ಯದಿಂದ ಪ್ರಭಾವಿತರಾಗಿ ವಿದ್ರೋಹಿಗಳೂ ಕುಳಿತುಕೊಂಡರು. ಎಲ್ಲರೂ ಕುಳಿತುಕೊಂಡಾಗ ಹಝ್ರತ್ ಉಸ್ಮಾನ್(ರ) ಹೇಳಿದರು: ಮದೀನ ನಿವಾಸಿಗಳೇ, ನಾನು ನಿಮ್ಮನ್ನು ಅಲ್ಲಾಹನಿಗೆ ಒಪ್ಪಿಸುತ್ತೇನೆ. ನನ್ನ ನಂತರ ನಿಮಗೆ ಖಿಲಾಫತ್‌ಗಾಗಿ ಬೇರೆ ಏನಾದರೂ ಉತ್ತಮ ವ್ಯವಸ್ಥೆ ಮಾಡಿಕೊಡಲು ನಾನು ಅಲ್ಲಾಹನೊಡನೆ ದುಆ ಮಾಡುತ್ತೇನೆ. ಇಂದಿನ ನಂತರ ಅಲ್ಲಾಹನು ನನ್ನ ಕುರಿತು ಏನಾದರೂ ತೀರ್ಮಾನ ಮಾಡುವ ತನಕ ನಾನು ಮನೆಯಿಂದ ಹೊರಗೆ ಹೋಗುವುದಿಲ್ಲ. ಭೌತಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ನಿಮ್ಮ ಮೇಲೆ ಆಡಳಿತ ನಡೆಸಲು ಯಾರಿಗೂ ನಾನು ಅವಕಾಶ ನೀಡುವುದಿಲ್ಲ. ಈ ಕೆಲಸವನ್ನು ಅಲ್ಲಾಹನಿಗೆ ಒಪ್ಪಿಸುತ್ತೇನೆ. ಅವನು ಇಷ್ಟವಿರುವವರನ್ನು ತನ್ನ ಕೆಲಸಕ್ಕಾಗಿ ಆಯ್ಕೆ ಮಾಡುವನು. ಅನಂತರ ಹಝ್ರತ್ ಉಸ್ಮಾನ್(ರ) ಅಲ್ಲಾಹನ ಹೆಸರಲ್ಲಿ ಸಹಾಬರೊಡನೆ ಮತ್ತು ಮದೀನ ನಿವಾಸಿಯರೊಡನೆ – ನೀವು ನನ್ನ ಸಂರಕ್ಷಣೆಯಲ್ಲಿ ನಿಮ್ಮ ಜೀವಗಳನ್ನು ದೊಡ್ಡ ಅಪಾಯದಲ್ಲಿ ಸಿಲುಕಿಸದಿರಿ. ತಮ್ಮ ತಮ್ಮ ಮನೆಗಳಿಗೆ ಹೋಗಿರಿ ಎಂದು ಹೇಳಿದರು. ಆದರೆ ಈ ಆದೇಶದ ನಂತರವೂ ಹಝ್ರತ್ ಅಲಿಯವರ, ಹಝ್ರತ್ ತಲ್‌ಹರವರ ಮತ್ತು ಹಝ್ರತ್ ಝುಬೇರ್‌ರ ಮಕ್ಕಳು ತಮ್ಮ ತಮ್ಮ ತಂದೆಯಂದಿರ ಆಜ್ಞೆ ಪ್ರಕಾರ

ಹಝ್‌ರತ್ ಉಸ್ಮಾನ್‌ರ ಮನೆ ಬಾಗಿಲಲ್ಲೇ ತಂಗಿದರು ಮತ್ತು ತಮ್ಮ ಖಡ್ಗಗಳನ್ನು ಕವಚಗಳ ಒಳಗೆ ಹಾಕಲಿಲ್ಲ.

(ಖುತ್‌ಬದ ಕೊನೆಯಲ್ಲಿ ಹುಝೂರ್, ಪಾಕಿಸ್ಥಾನ ಮತ್ತು ಅಲ್‌ಜೀರಿಯಾದ ಅಹ್ಮದಿಯರಿಗಾಗಿ ಪ್ರಾರ್ಥಿಸುವಂತೆ ಮನವಿ ಮಾಡಿದರು. ಇತ್ತೀಚೆಗೆ ನಿಧನರಾದ ಮುಕರ್ರಮ್ ಮೌಲವಿ ಮುಹಮ್ಮದ್ ನಜೀಬ್ ಖಾನ್ ಸಾಹಿಬ್, ನಾಯಿಬ್ ನಾಝಿರ್ ದಅವತೆ ಇಲಲ್ಲಾಹ್ ಜುನೂಬಿ ಹಿಂದ್ ಖಾದಿಯಾನ್, ಮುಕರ್ರಮ್ ನಧೀರ್ ಅಹ್ಮದ್ ಖಾದಿಮ್ ಸಾಹಿಬ್, ಮುಕರ್ರಮ್ ಅಲ್‌ಹಾಜ್ ಡಾಕ್ಟರ್ ನಾನಾ ಮುಸ್ತಫಾ ಸಾಹಿಬ್ ಘಾನ ಹಾಗೂ ಮುಕರ್ರಮ್ ಗುಲಾಂ ನಬಿ ಸಾಹಿಬ್ ಬಿನ್ ಫಝುಲ್‌ದೀನ್ ಸಾಹಿಬ್ ರಬ್‌ವ ಇವರ ಸ್ವಭಾವ ಗುಣಗಳನ್ನು ಸ್ಮರಿಸಿದರು ಹಾಗೂ ನಮಾಝುಗಳ ನಂತರ ಈ ದಿವಂಗತರ ಜನಾಝು ಗಾಯಿಬ್ ನಮಾಝು ನಿರ್ವಹಿಸುವುದಾಗಿ ಹೇಳಿದರು. ಮೌಲವಿ ನಜೀಬ್ ಖಾನ್ ಸಾಹಿಬರ ಸದ್ಗುಣಗಳನ್ನು ವಿವರಿಸುತ್ತಾ ಹುಝೂರ್ ಹೇಳಿದರು:) ಮುಕರ್ರಮ್ ಮೌಲವಿ ಮುಹಮ್ಮದ್ ನಜೀಬ್ ಖಾನ್ ಸಾಹಿಬರು ಕೇರಳದ ಎರ್ನಾಕುಳಂ ಜಿಲ್ಲೆಯ ಕಾಕನಾಡ್ ಜಮಾಅತಿನ ಮರ್‌ಹೂಂ ಮಾಸ್ಟರ್ ಬಿ.ಎಂ. ಮುಹಮ್ಮದ್ ಸಾಹಿಬರ ಮಗನಾಗಿದ್ದರು. ಫೆಬ್ರವರಿ 14ರಂದು ನಿಧನರಾದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ದಿವಂಗತರು ಅಲ್ಲಾಹನ ಅನುಗ್ರಹದಿಂದ ಮೂಸಿ ಆಗಿದ್ದರು. ಅವರು ಪತ್ನಿ ಹಾಗೂ ಮೂವರು ಪುತ್ರರನ್ನು ಅಗಲಿ ಹೋಗಿದ್ದಾರೆ. ಮೂವರು ಮಕ್ಕಳು ಸಹ ಅನುಗ್ರಹೀತ ವಕ್‌ಫೆ ನೌ ಯೋಜನೆಯಲ್ಲಿ ಸೇರಿದವರಾಗಿದ್ದಾರೆ. ಓರ್ವ ಪುತ್ರ ಜಾಮಿಯ ಅಹ್ಮದಿಯಾದಲ್ಲಿ ಕಲಿಯುತ್ತಿದ್ದಾನೆ. ದಿವಂಗತರು ಜನ್ಮತಃ ಅಹ್ಮದಿಯಾಗಿರಲಿಲ್ಲ. 17ನೇ ವಯಸ್ಸಿನಲ್ಲಿ ಅವರಿಗೆ ತನ್ನ ತಂದೆಯ ಮೂಲಕ ಅಹ್ಮದಿಯ್ಯತ್‌ನ ಸಂದೇಶ ಲಭಿಸಿತು. ನಂತರ ಅವರು 'ಇಸ್ಲಾಂ ಧರ್ಮ ತತ್ವಜ್ಞಾನ' ಎಂಬ ಗ್ರಂಥವನ್ನೂ ಇತರ ಅಹ್ಮದಿಯಾ ಸಾಹಿತ್ಯಗಳನ್ನೂ ಓದಲು ತೊಡಗಿದರು. ಒಂದು ದಿನ ಅವರು ತಂದೆಯೊಡನೆ ಕೇಳಿದರು: ಓರ್ವ ಬಾಲಕ ತನ್ನ ಎಷ್ಟನೆಯ ವಯಸ್ಸಿನಲ್ಲಿ ತನ್ನ ಕುರಿತು ಸ್ವಯಂ ತೀರ್ಮಾನ ಕೈಗೊಳ್ಳಬಹುದು? ಅದಕ್ಕೆ ಅವರ ತಂದೆ– ಹದಿನೇಳು ಹದಿನೆಂಟನೆಯ ವಯಸ್ಸಿನಲ್ಲಿ ಸ್ವಯಂ ನಿರ್ಧಾರ ಕೈಗೊಳ್ಳಬಹುದೆಂದು ಉತ್ತರಿಸಿದರು. ಹಾಗೆ ದಿವಂಗತರು ಮೌಲಾನ ಮುಹಮ್ಮದ್ ಅಲವಿ ಸಾಹಿಬರ ಮೂಲಕ ಬೈಅತ್ ಮಾಡಿ ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸಿದರು..... ಬೈಅತ್ ಮಾಡಿದ ನಂತರ ಅವರು ಕಂಡ ಒಂದು ಸ್ವಪ್ನದ ಪ್ರಕಾರ ಜಾಮಿಯ ಅಹ್ಮದಿಯಾದಲ್ಲಿ ಪ್ರವೇಶ ಗಳಿಸಿದರು..... ನಂತರ ಅವರು ಮೊದಲು ಚಂಡಿಗಡ್‌ನಲ್ಲಿ ಅನಂತರ ಇತರ ಸ್ಥಳಗಳಲ್ಲಿ ಮುಬಲ್ಲಿಗ್ ಆಗಿ ಸೇವೆ ಸಲ್ಲಿಸಿದರು. ನಂತರ ನಾನು ಅವರನ್ನು ನಾಯಿಬ್ ನಾಝಿರ್ ದಅ್‌ವತೆ ಇಲಲ್ಲಾಹ್ ಆಗಿ ನೇಮಿಸಿದೆ. ಅದರೊಂದಿಗೆ ಶುಅಬ ನೂರುಲ್ ಇಸ್ಲಾಂನ ನಾಯಿಬ್ ಇನ್‌ಚಾರ್ಜ್ ಆಗಿ ತಬ್‌ಲೀಗ್ ಕಾರ್ಯಗಳನ್ನು ಸಹ ಉತ್ತಮ ರೀತಿಯಲ್ಲಿ ನಿರ್ವಹಿಸುತ್ತಿದ್ದರು. ಅವರು ನಮಾಝ್, ಉಪವಾಸ ಮೊದಲಾದ ಕರ್ಮಾನುಷ್ಠಾನಗಳನ್ನು ವಿಧಿ ಪ್ರಕಾರ ಅನುಷ್ಠಿಸುವವರಾಗಿದ್ದರು. ತಹಜ್ಜುದ್ ನಿರ್ವಹಿಸುತ್ತಿದ್ದರು. ಖಿಲಾಫತ್‌ನೊಂದಿಗೆ ಪ್ರಾಮಾಣಿಕ ಸಂಬಂಧ ಹಾಗೂ ನಿಷ್ಕಳಂಕ ಸ್ನೇಹ ಹೊಂದಿದವರಾಗಿದ್ದರು. ಪ್ರತಿಯೊಂದು ಕೆಲಸವನ್ನೂ ನಿಷ್ಠೆ ಮತ್ತು ಕ್ಲಪ್ತತೆಯಿಂದ ನಿರ್ವಹಿಸುತ್ತಿದ್ದರು. ಅವರಿಗೆ ಜಮಾಅತಿನ ಹಲವು ಪುಸ್ತಕಗಳನ್ನು ಮಲಯಾಳಂ ಭಾಷೆಗೆ ಅನುವಾದಿಸಲು ಹಾಗೂ ಭಾಷಾಂತರಿಸಲಾದ ಹಲವು ಗ್ರಂಥಗಳನ್ನು ಪರಿಶೀಲನೆ ಮಾಡಲು ಸೌಭಾಗ್ಯ ಲಭಿಸಿತ್ತು. ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 05-03-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian



***Email**: khutuba.kannada@gmail.com*



**You can find all the Sermons archived at**: www.alislam.org/friday-sermon